ದಿನಾಂಕಃ 01.08.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದ:</u>**

1. ನನ್ನ ವಿವಾಹ 1980 ರಲ್ಲಿ ಆಗಿರುತ್ತದೆ. ರ 1971 ರಲ್ಲಿ ಕ್ರಯಪತ್ರದ ಆದ ನಂತರ ನಿಮ್ಮ ಮಾವನವರಿಗೆ ದಾವಾ ಸ್ವತ್ತಿನ ಸ್ವಾಧೀನ ಬಂದಿರುವ ಬಗ್ಗೆ ನಿಮಗೆ ಮಾಹಿತಿ ಇದೇಯಾ ಎಂದರೆ ಆ ಸಮಯದಲ್ಲಿ ಗೊತ್ತಿಲ್ಲ ಮದುವೆಯಾದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಕ್ರಯ ಆದ ನಂತರ ಸ್ವಾಧೀನ ವಾದಿಯರ ತಂದೆ ದ್ಯಾವಪ್ಪ ರವರ ಬಳಿ ಇತ್ತು ಎಂದರೆ ಸರಿಯಲ್ಲ.

2. ನಿಮ್ಮ ಮನೆ ಇರುವ ಸರ್ವೆ ನಂಬರ್ ಯಾವುದು ಎಂದರೆ ಸರ್ವೆ ನಂ.70 ಎಂದು ನುಡಿಯುತ್ತಾರೆ. ಅದು 5 ಎಕರೆ 18 ಗುಂಟೆ ಇದೆ ಎಂದು ನುಡಿಯುತ್ತಾರೆ. ಅದರೊಳಗೆ ನಮ್ಮ ವಾಸದ ಮನೆ ಬರುತ್ತದೆ. ಮನೆಗೆ ಪಂಚಾಯಿತಿ ಖಾತೆ ಇರುತ್ತದೆ. ಸದರಿ ಖಾತೆ ನನ್ನ ಪತ್ನಿ ಜಯಕುಮಾರಿರವರ ಹೆಸರಿನಲ್ಲಿದೆ. 2002 ರ ನಂತರ ಅವರಿಗೆ ಖಾತೆಯಾಗಿರುತ್ತದೆ.

3. ದಾವಾ ಸ್ವತ್ತಿನಲ್ಲಿ ನಿಮ್ಮ ಮಾವನವರ ವಾಸದ ಮನೆ ಇಲ್ಲ ಎಂದರೆ ವಾಸದ ಮನೆ ಇಲ್ಲ, ಕೃಷಿ ಪರಿಕರಗಳನ್ನು ಇಟ್ಟುಕೊಳ್ಳಲು ಶೆಡ್ ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ.

4. ಸರ್ಕಾರದಿಂದ ಒಬ್ಬ ವ್ಯಕ್ತಿಗೆ ಒಂದು ಬಾರಿ ಮಾತ್ರ ನಿವೇಶನ ಅಥವಾ ಮನೆ ಕೊಡುತ್ತಾರೆ ಎಂದರೆ ಸರಿ. ನೀವು ವಾಸ ಇರುವ ಮನೆ ಪಂಚಾಯಿತಿ ಕೊಟ್ಟಿರುವ ಮನೆ ಎಂದರೆ ಸರಿಯಲ್ಲ.

5. ಸಾಕ್ಷಿಗೆ ಒಂದು ದೃಡಿಕೃತ ಫೋಟೋ ತೋರಿಸಲಾಗಿ ಅದು ವಿಕ್ರಮ್ ರವರ ವಾಸದ ಮನೆ ಎಂದರೆ ನಾವು ಅವರಿಗೆ ವಾಸ ಮಾಡಲು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಅದು ಮೊದಲು ಶೆಡ್ ಆಗಿತ್ತು ಅದನ್ನು ವಿಕ್ರಮ್ ರವರ ಮನೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದೃಡಿಕೃತ ಫೋಟೋಗಳನ್ನು ನಿಪಿ-23 ಎಂದು ಗುರುತಿಸಲಾಯಿತು. ಸದರಿ ಎರಡನೇ ಫೋಟೋದಲ್ಲಿ ಕಾಣುವ ಜಾಗ ಅವರು ಮಾಡಿಕೊಂಡಿರುವ ಕಣ ಎಂದರೆ ನಾವು ಮಾಡಿದ್ದೇವೆ ಎಂದು ನುಡಿಯುತ್ತಾರೆ.

6. ಸಾಕ್ಷಿಗೆ ಒಂದು ದೃಡಿಕೃತ ಫೋಟೋವನ್ನು ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ದಾವಾ ಸ್ವತ್ತಿನಲ್ಲಿ ವಾದಿಯವರು ಬೆಳೆ ಬೆಳೆದಿದ್ದಾರೆ ಎಂದರೆ ನಾವು ಬೆಳೆದಿದ್ದೆವೆ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಪಿ-24 ಎಂದು ಗುರುತಿಸಲಾಯಿತು. ನಿಪಿ-23 ಮತ್ತು 24 ರಲ್ಲಿ ಕಾಣುವ ಮನೆ ಮತ್ತು ಸ್ವತ್ತು ವಾದಿಯವರಿಗೆ ಸೇರಿದ್ದು ಎಂದರೆ ಸರಿಯಲ್ಲ.

7. ಈ ದಾವಾವನ್ನು ಹಾಕಿದ ನಂತರ ನೀವು ದಿ.16.06.2023 ರಂದು ಬಾಳೂರು ಪೋಲಿಸ್ ಠಾಣೆಗೆ ದೂರು ನೀಡಿದ್ದೀರಾ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ-25 ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿ ವಾದಿ ಮನೆ ಕಟ್ಟಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರು ಕೊಟ್ಟಿದ್ದೀರಾ ಎಂದರೆ ಸರಿ. ಆ ದೂರಿಗೆ ಸಂಬಂದಪಟ್ಟಂತೆ ವಾದಿ ಮತ್ತು ನಿಮ್ಮನ್ನು ಠಾಣೆಗೆ ಕರೆಯಿಸಿದ್ದರು ಎಂದರೆ ಸರಿ.

8. ಅವರು ಪೊಲೀಸರವರ ಮುಂದೆ 15-20 ವರ್ಷದ ಹಿಂದೆ ಮನೆ ಕಟ್ಟಿದ್ದು ಅದನ್ನು ನವೀಕರಿಸಿರುವುದಾಗಿ ಹೇಳಿಕೆ ನೀಡಿದ್ದಾರೆ ಎಂದರೆ ಅವರು ಹೇಳಿರಬಹುದು ಎಂದು ನುಡಿಯುತ್ತಾರೆ. ಸದರಿ ವಿಚಾರ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಈ ದಾವಾವನ್ನು ಹಾಕುವ ಪೂರ್ವದಲ್ಲಿ ವಾದಿಯವರು ವಕೀಲರ ಮೂಲಕ ನೋಟಿಸ್ ಕೊಟ್ಟಿದ್ದರು ಎಂದರೆ ಸರಿ. ಸದರಿ ನೋಟಿಸನ್ನು ನಿಪಿ-26 ಎಂದು ಗುರುತಿಸಲಾಯಿತು. ಸದರಿ ನೋಟಿಸಿಗೆ ಉತ್ತರ ಕೊಟ್ಟಿದ್ದೀರಾ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.